

## ವಜ್ರದ ಮೂಲ

ನಿಸರ್ಗದಲ್ಲಿ ದೊರೆಯುವ ವಜ್ರಕ್ಕೂ, ಒಂದು ನಿರ್ದಿಷ್ಟ ಒಡವೆಯಾಗಿ ಖರೀದಿಸುವವರ ಕೈ ಸೇರುವ ವಜ್ರಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ವಜ್ರದ ಹರಳು ಹೇಗೆ ಉತ್ಪತ್ತಿಯಾಗುತ್ತದೆ ಎಂಬುದು ಕುತೂಹಲಕರ. ಭೂಮಿಯ ಆಳಕ್ಕೆ ಸುಮಾರು 140ರಿಂದ 190 ಕಿ.ಮೀ ಕೆಳಗೆ ವಜ್ರದ ನಿಕ್ಷೇಪಗಳಿವೆ. ಇದನ್ನು ಗಣಿಗಾರಿಕೆಯ ಮೂಲಕ ಹೊರತೆಗೆಯಲಾಗುತ್ತದೆ. ಭೂಮಿಯನ್ನು ಅಗೆದು ಕಲ್ಲುಗಳ ಮಧ್ಯೆಯಿಂದ ವಜ್ರವನ್ನು ಬೇರ್ಪಡಿಸಲು ಸುಮಾರು 900ರಿಂದ 1300 ಡಿಗ್ರಿ ಉಷ್ಣಾಂಶ ಬೇಕಾಗುತ್ತದೆ. ಅಂದಾಜು 45ರಿಂದ 60 ಕಿಲೋಬಾರ್ (ಒತ್ತಡವನ್ನು ಅಳೆಯುವ ಮಾಪನ) ನಲ್ಲಿ ವಜ್ರ ಉತ್ಪಾದನೆಯಾಗುತ್ತದೆ.

ಕಲ್ಲುಗಳು ಮೊದಲು ಕಾರ್ಬನ್ ಕ್ರಿಸ್ಟಲ್ ರೂಪದಲ್ಲಿದ್ದು, ಒತ್ತಡ ಹಾಗೂ ಉಷ್ಣತೆಯಿಂದಾಗಿ ಅದು ವಜ್ರವಾಗಿ ಮಾರ್ಪಾಡಾಗುತ್ತದೆ. ಇವೆರಡೂ ಇಲ್ಲದೇ ಹೋದಲ್ಲಿ ಕಾರ್ಬನ್ ಗ್ರಾಫೈಟ್ ಆಗುತ್ತದೆ.

ಜ್ವಾಲಾಮುಖಿಯ ಒತ್ತಡದ ಮೂಲಕ ಭೂಮಿಯ ಕೆಳಗೆ ಎಲ್ಲಿ ವಜ್ರ ಇದೆ ಎಂಬುದು ಪತ್ತೆಯಾಗುತ್ತದೆ. ಅದನ್ನು ಗಣಿಕಾರ್ಮಿಕ ಭೂಮಿಯಿಂದ ತೆಗೆಯುತ್ತಾನೆ. ಗಣಿಗಾರಿಕೆ ಮೂಲಕ ತೆಗೆದ ಇಂತಹ ಕಲ್ಲುಗಳಲ್ಲಿ ಒಟ್ಟು 16 ಸಾವಿರ ವಿಧದ ಕಲ್ಲುಗಳಿವೆಯಂತೆ! ಭೂಮಿಯಿಂದ ಮೇಲೆತ್ತಿದ ಕಲ್ಲುಗಳನ್ನು ಮೊದಲು ತೊಳೆಯಲಾಗುತ್ತದೆ. ಎಲ್ಲಾ ವಿಧದ ಕಲ್ಲುಗಳನ್ನು ಮೂರು ವಿಭಾಗ ಮಾಡಿ ಅದರಲ್ಲಿ ಜೆಮ್ ಕ್ವಾಲಿಟಿ, ನಿಯರ್ ಜೆಮ್ ಕ್ವಾಲಿಟಿ ಹಾಗೂ ಇಂಡಸ್ಟ್ರಿಯಲ್ ಕ್ವಾಲಿಟಿ ಎಂದು ವಿಭಾಗಿಸಲಾಗುತ್ತದೆ.

ವಜ್ರದ ಈ ಕಲ್ಲುಗಳ ಪರಿಶುದ್ಧತೆಯನ್ನು ತಿಳಿಯುವುದು ಸುಲಭ. ವಜ್ರದ ಹರಳುಗಳು ಗ್ರೀಸ್ ಮತ್ತು ಎಣ್ಣೆಗೆ ಅಂಟಿಕೊಳ್ಳುತ್ತದೆ. ಬೇರೆ ಯಾವುದೇ ಕಲ್ಲುಗಳಿಗೆ ಈ ಅಂಟಿಕೊಳ್ಳುವ ಗುಣ ಇಲ್ಲದಿರುವುದರಿಂದ ವಜ್ರದ ಹರಳುಗಳನ್ನು ಗುರುತಿಸುವುದು ಸುಲಭ.

ಗಣಿಗಳಲ್ಲಿ ಸಿಗುವ ವಜ್ರಕ್ಕೂ, ಗ್ರಾಹಕರ ಕೈ ಸೇರುವಾಗ ಇರುವ ಒಡವೆ ರೂಪಕ್ಕೂ ಅಜಗಜಾಂತರ ವ್ಯತ್ಯಾಸಗಳಿವೆ. ನಿಸರ್ಗದಲ್ಲಿ ಒಂದು ಕಲ್ಲಿನ ಆಕಾರದಲ್ಲಿ ಲಭಿಸುವ ವಜ್ರಕ್ಕೆ ಒಂದು ನಿರ್ದಿಷ್ಟ ರೂಪ ನೀಡಲಾಗುತ್ತದೆ. ಪರಿಣತ ಕುಶಲಕರ್ಮಿ ಈ ಕಲ್ಲುಗಳನ್ನು ವೇಗವಾಗಿ ತಿರುಗುವ ತಟ್ಟೆಗಳ ನೆರವಿನಿಂದ ಕತ್ತರಿಸುತ್ತಾನೆ. ಇಲ್ಲಿ ವಿನ್ಯಾಸಗಾರನ ಸೃಜನಶೀಲತೆ, ಕ್ರಿಯಾಶೀಲತೆ ಮತ್ತು ಜಾಣತನ ಎಲ್ಲವೂ ಕೆಲಸ ಮಾಡುತ್ತದೆ. ವಜ್ರಕ್ಕೆ ನಿಜವಾದ ಮೌಲ್ಯ ಬರುವುದು ಅದರ 'ಕಟಿಂಗ್'ನಿಂದ. ಪಳಗಿದ ವಿನ್ಯಾಸಗಾರ ತನ್ನ ಕೈಚಳಕದಿಂದ ಕಟಿಂಗ್ ನಡೆಸುತ್ತಾನೆ.

ವಜ್ರದ ಒಡವೆಯಲ್ಲಿ ನಾಲ್ಕು ಪ್ರಮುಖ ಮೌಲ್ಯಾಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ವಿನ್ಯಾಸ ಮಾಡಲಾಗುತ್ತದೆ. 'ಕಟ್, ಕಲರ್, ಕ್ಲ್ಯಾರಿಟಿ ಹಾಗೂ ಕ್ಯಾರೆಟ್' ಎಂಬ ನಾಲ್ಕು 'ಸಿ' ಬಹಳ ಮುಖ್ಯವಾದದ್ದು. ವಜ್ರದ ಹರಳು ದೊಡ್ಡದಾದಷ್ಟು ಅದರ ಹರಳಿನ ಗುಣಮಟ್ಟ ಉತ್ಕೃಷ್ಟವಾದದ್ದು ಎನ್ನುತ್ತಾರೆ ಆಭರಣ ತಜ್ಞರು.

ವಿನ್ಯಾಸಗಾರನ ಸೃಜನಶೀಲತೆ ಆಭರಣ ತಯಾರಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಹಲವು ಹಂತಗಳನ್ನು ದಾಟಿ ಒಂದು ಒಡವೆ ಪರಿಪೂರ್ಣ ವಿನ್ಯಾಸದೊಂದಿಗೆ, ಹೊಳಪು, ಅಂದದೊಂದಿಗೆ ಗ್ರಾಹಕನ ಕೈ ಸೇರುತ್ತದೆ. ಒಬ್ಬ ನಿಪುಣ ವಿನ್ಯಾಸಗಾರ ಮೊದಲಿಗೆ ಒಡವೆಯ ವಿನ್ಯಾಸವನ್ನು ಒಂದು ಬಿಳಿಹಾಳೆ ಮೇಲೆ ಚಿತ್ರಿಸುತ್ತಾನೆ. ಇದನ್ನು ಸ್ಕ್ಯಾನ್ ಮಾಡಿ ಕಂಪ್ಯೂಟರ್‌ಗೆ ಅಳವಡಿಸಿ ಅಲ್ಲಿ ವಿನ್ಯಾಸವನ್ನು ತಿದ್ದಿ, ಉತ್ತಮ ಆಕಾರ, ಸ್ಪಷ್ಟ ರೂಪ ನೀಡಲಾಗುತ್ತದೆ. ಆ ಬಳಿಕ, ವ್ಯಾಕ್ಸ್ ಅಥವಾ ರಬ್ಬರ್ ಬಳಸಿ ಒಡವೆಯ ಮಾಡೆಲ್ ತಯಾರಿಸಿ ಮೆಷಿನ್ ಮೂಲಕ ಚಿನ್ನ ಅಥವಾ ಬೆಳ್ಳಿಯ ಮೇಲೆ ಅದೇ ವಿನ್ಯಾಸವನ್ನು ಎರಕ ಹೊಯ್ಯಲಾಗುತ್ತದೆ.



## ನಾಯಿಗಳಿಗೂ ಡೈಮಂಡ್..!

ಬೆಂಗಳೂರಿನ ಶ್ರೀ ಕೃಷ್ಣಯ್ಯಚೆಟ್ಟಿ ಜ್ಯುವೆಲ್ಲರಿಯಲ್ಲಿ ನಾಯಿಗಳಿಗೂ ವಜ್ರಾಭರಣ ಲಭ್ಯ. ಮನೆಗಳಲ್ಲಿ ಸಾಕಿದ 'ಪೆಟ್ಸ್'ಗಳಿಗಾಗಿಯೇ 'ಕಲೆಕ್ಷನ್ ಫಾರ್ ಪೆಟ್ಸ್' ಎಂಬ ಪರಿಕಲ್ಪನೆಯಲ್ಲಿ ವಜ್ರದ ಹರಳಿನ ಆಭರಣಗಳನ್ನು ತಯಾರು ಮಾಡಲಾಗಿದೆ. ಈ ಸಂಗ್ರಹದಲ್ಲಿ ಪೆಂಡೆಂಟ್, ಉಂಗುರ, ಬೆಲ್ಟ್‌ಗೆ ಸಿಕ್ಕಿಸಿಕೊಳ್ಳಲು ಒಡವೆ ಮುಂತಾದ ವೈವಿಧ್ಯಗಳಿವೆ.

ನಾಯಿಗಳಿಗೆ ಮಾತ್ರವಲ್ಲದೆ ಬೆಕ್ಕುಗಳಿಗೂ ಇದನ್ನು ಬಳಸಬಹುದು. ಕೆಲವು ವಿನ್ಯಾಸದಲ್ಲಿ ನಾಯಿ, ಬೆಕ್ಕುಗಳ ಹೆಜ್ಜೆಗುರುತನ್ನು (ಫೂಟ್‌ಪ್ರಿಂಟ್ಸ್) ಯಥಾವತ್ತಾಗಿ ವಜ್ರದ ಒಡವೆಯಲ್ಲಿ ಪಡಿಮೂಡಿಸಲಾಗಿದೆ. ಇದು ಅತ್ಯಂತ ಆಕರ್ಷಕವಾಗಿದ್ದು, ಖರೀದಿಸುವ ಶ್ರೀಮಂತರ ಸಂಖ್ಯೆಯೂ ಇತ್ತೀಚೆಗೆ ಹೆಚ್ಚಿದೆ.

